ಕರ್ನಾಟಕ ಸರ್ಕಾರ
Government of Karnataka

ಡಿಎಸ್‌ಇಆರ್‌ಟಿ
DSERT

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpl.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಸಂಖ್ಯೆ: DSERT/EVG/2022-23 ಅ.ಹಾ/32/2021-22 ದಿನಾಂಕ: 29-03-2022

: ಜ್ಞಾಪನಾ :

ವಿಷಯ:- 2022-23 ನೇ ಸಾಲಿಗೆ 'ಕಲಿಕಾ ಚೇತರಿಕೆ' ಕಾರ್ಯಕ್ರಮವನ್ನು ಅನುಷ್ಠಾನಿಸುವ ಕುರಿತು

ಉಲ್ಲೇಖ:-1. DSERT/EVG/2022-23ಅ.ಹಾ/32/2021-22 ದಿನಾಂಕ: 07-03-2022

2. ದಿ:25/03/2022 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರವರ ಅಧ್ಯಕ್ಷತೆಯಲ್ಲಿ ನಡೆದ ಕೋರ್ ಸಮಿತಿಯಲ್ಲಿ ಸೂಚಿಸಿದಂತೆ

******************

ಕೋವಿಡ್ 19 ಸಾಂಕ್ರಾಮಿಕ ಜಾಗತಿಕವಾಗಿ ಹರಡಿರುವ ಹಿನ್ನೆಲೆಯಲ್ಲಿ 2022-2023 ನೇ ಸಾಲಿನಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು 1 ರಿಂದ 9ನೇ ತರಗತಿಗಳಿಗೆ ಅನುಷ್ಠಾನಿಸಲಾಗುವುದು. 10ನೇ ತರಗತಿ ವಿದ್ಯಾರ್ಥಿಗಳಿಗೂ ಕೂಡಾ ಹಿಂದಿನ 2 ವರ್ಷಗಳಲ್ಲಿ ನಿರಂತರವಾಗಿ ಭೌತಿಕ ತರಗತಿಗಳು ನಡೆಯದ ಕಾರಣ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸುವ ಅವಶ್ಯಕತೆ ಇದೆ. ಹೀಗಾಗಿ ಉಲ್ಲೇಖಿತ 2 ರ ಸಭೆಯಲ್ಲಿ ಸೂಚಿಸಿದಂತೆ 2022-2023 ನೇ ಸಾಲಿನಲ್ಲಿ 10 ನೇ ತರಗತಿಗಳಿಗೆ 30 ದಿನಗಳ ಸೇತುಬಂಧ ಕಾರ್ಯಕ್ರಮವನ್ನು ಅಳವಡಿಸಲು ಉದ್ದೇಶಿಸಿದ್ದು, ಸೇತುಬಂಧ ಸಾಹಿತ್ಯವನ್ನು ರಚಿಸುವ ಅವಶ್ಯಕತೆ ಇದೆ.

4 ರಿಂದ 9ನೇ ತರಗತಿಗಳಿಗೆ ವಿಷಯವಾರು, ತರಗತಿವಾರು ಕಲಿಕಾ ಹಾಳೆ ಹಾಗೂ ಶಿಕ್ಷಕರ ಕೈಪಿಡಿಗಳನ್ನು ಉಲ್ಲೇಖಿತ ಪತ್ರ 1 ರನ್ವಯ ರಚಿಸಲಾಗಿದ್ದು, 2021-2022 ನೇ ಸಾಲಿನಲ್ಲಿ 10ನೇ ತರಗತಿಗಳಿಗೆ ಅಳವಡಿಸಿದ್ದ 30 ದಿನಗಳ ಸೇತುಬಂಧ ವಿಷಯವಾರು ಸೇತುಬಂಧ ಸಾಹಿತ್ಯವನ್ನು ಅಗತ್ಯವಿದ್ದಲ್ಲಿ ಪರಿಷ್ಕರಿಸಿ, ಅದಕ್ಕನುಗುಣವಾಗಿ 8 ಮತ್ತು 9 ನೇ ತರಗತಿಗಳ ಕಲಿಕಾ ಫಲಗಳನ್ವಯ ಚಟುವಟಿಕೆಗಳನ್ನು ನಿರ್ವಹಿಸಲು ಶಿಕ್ಷಕರ ಸಾಹಿತ್ಯವನ್ನು ವಿಷಯವಾರು 25 ಪುಟಗಳಿಗೆ ಮೀರದಂತೆ ಸಿದ್ಧಪಡಿಸಲು ಈ ಮೂಲಕ ತಿಳಿಸಿದೆ. ಸದರಿ ಸೇತುಬಂಧ ಸಾಹಿತ್ಯವು ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಪ್ರತಿ ವಿಷಯದಲ್ಲಿ 8 ಮತ್ತು 9 ನೇ ತರಗತಿಗಳಲ್ಲಿ ಕಾರ್ಯನಿರ್ವಹಿಸಿದ 2 ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವುದು. ಈ ಹಿಂದೆ 4 ರಿಂದ 9 ನೇ ತರಗತಿಗಳ ಸಾಹಿತ್ಯವನ್ನು ರಚಿಸುವಲ್ಲಿ ಕಾರ್ಯ ನಿರ್ವಹಿಸಿರುವ ಡಯಟ್‌ಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸುವುದು.

| ಕ್ರಮ ಸಂಖ್ಯೆ | ವಿಷಯ | ಕಾರ್ಯ ನಿರ್ವಹಿಸುವ ಡಯಟ್‌ಗಳ ಹೆಸರು |
|---|---|---|
| 01 | ಗಣಿತ | ದಾವಣಗೆರೆ |
| 02 | ವಿಜ್ಞಾನ | ತುಮಕೂರು |
| 03 | ಸಮಾಜ ವಿಜ್ಞಾನ | ಶಿವಮೊಗ್ಗ |
| 04 | ಕನ್ನಡ ಪ್ರಥಮ ಭಾಷೆ | ಮಂಡ್ಯ |
| 05 | ಇಂಗ್ಲಿಷ್ ದ್ವಿತೀಯ ಭಾಷೆ | ಮಂಗಳೂರು |
| 06 | ಹಿಂದಿ ತೃತೀಯ ಭಾಷೆ | ಬೀದರ್ |
| 07 | ಉರ್ದು ಪ್ರಥಮ ಭಾಷೆ | ಬಿಜಾಪುರ |
| 08 | ಮರಾಠಿ ಪ್ರಥಮ ಭಾಷೆ | ಬೆಳಗಾಂ |
| 09 | ಸಂಸ್ಕೃತ ಪ್ರಥಮ ಭಾಷೆ ಸಂಸ್ಕೃತ | ಬೆಂಗಳೂರು ನಗರ |
| 10 | ತೆಲುಗು ಪ್ರಥಮ ಭಾಷೆ | ಬೆಂಗಳೂರು ಗ್ರಾಮಾಂತರ |
| 11 | ತಮಿಳು ಪ್ರಥಮ ಭಾಷೆ | ಬೆಂಗಳೂರು ಉತ್ತರ |

ಡಯಟ್ ಹಂತದಲ್ಲಿ ಕಾರ್ಯಾಗಾರಗಳನ್ನು ನಡೆಸಿ ದಿನಾಂಕ: 08/04/2022 ರೊಳಗೆ ಸಾಹಿತ್ಯವನ್ನು ಸಿದ್ಧಪಡಿಸಿ evg.kardsert@gmail.com ಗೆ ಇಮೇಲ್ ಮೂಲಕ ಕಳುಹಿಸುವುದು.

ನಿರ್ದೇಶಕರು
ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಇಲಾಖೆ
ಬೆಂಗಳೂರು

ಪ್ರತಿಯನ್ನು: ಅಗತ್ಯ ಕ್ರಮಕ್ಕಾಗಿ

1. ಪ್ರಾಂಶುಪಾಲರು, ಡಯಟ್, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ತುಮಕೂರು, ಶಿವಮೊಗ್ಗ, ಮಂಡ್ಯ, ಮಂಗಳೂರು, ಬೀದರ್, ಬಿಜಾಪುರ, ಬೆಳಗಾಂ ಮತ್ತು ಬೆಂಗಳೂರು ನಗರ ರವರಿಗೆ.
2. ಕಛೇರಿ ಪ್ರತಿ.